# ನಿನ ಪಾದವನು ನೀಡಮ್ಮಾ

**ರಾಗ: ವಾಚಸ್ಪತಿ   ತಾಳ: ಆದಿ**

**ಪಲ್ಲವಿ:**

ನಿನ ಪಾದವನು ನೀಡಮ್ಮಾ
ಜಗಗಳ ಜನನಿ ಓ ಅಮ್ಮಾ

**ಚರಣ :**

ಶಿರದಲಿ ಧರಿಸಿದ ಬೊಮ್ಮನಿಗೆ
ಸೃಷ್ಟಿ ಜ್ಞಾನವು ಲಭಿಸುವುದು
ಶಿರದಲಿ ಧರಿಸಿರೆ ನೀ ನಮಗೆ
ಸರ್ಗಾತೀತ ಸ್ಥಿತಿ ಕೊಡುವೆ ...1

ಶಿರದಲಿ ಧರಿಸಿದ ಶ್ರೀಹರಿಗೆ
ಪಾಲನೆ ಮಾರ್ಗವು ತೋರುವುದು
ಶಿರದಲಿ ಧರಿಸಿರೆ ನೀ ನಮಗೆ
ಪಾಲನೆ ಕಷ್ಟವ ನೀಗಿಸುವೆ ...2

ಶಿರದಲಿ ಧರಿಸಿದ ಶರ್ವನಿಗೆ
ಪ್ರಳಯದ ತಂತ್ರವು ತಿಳಿಯುವುದು
ಶಿರದಲಿ ಧರಿಸಿರೆ ನೀ ನಮಗೆ
ಅಕ್ಷರ ಪದ-ದಯ ಪಾಲಿಸುವೆ ...3

ನಿನ್ನಯ ಪಾದದ ಅರಿಸಿನವು
ಲಕುಮಿಯ ಮಂಗಳ ಮುಖರಾಗ
ನಿನ್ನಯ ಪಾದದ ಪಾರಾಣಿ
ತಾಂಬೂಲ ರಸವದು ಬ್ರಹ್ಮಿಣಿಗೆ ...4

ನಿನ್ನಯ ಗೆಜ್ಜೆಯ ಘಲುದನಿಯು
ಗುರುವದು, ವೇದಕೇ ಬೋಧಿಪುದು
ನಿನ್ನಯ ಪಾದದ ಶುಭಕಾಂತಿ
ಸಚ್ಚಿದಾನಂದದ ಚಿರ ಶಾಂತಿ ...5